Teachingninja.in

Latest Govt Job updates

Private Job updates

Free Mock tests available

Visit - teachingninja.in

# Karnataka High Court

## Previous Year Paper (Mains) District Judge (Criminal Law) 16 Feb 2020

Teachingninja.in

**HIGH COURT OF KARNATAKA**
ಕರ್ನಾಟಕ ಉಚ್ಚ ನ್ಯಾಯಾಲಯ

**MAIN WRITTEN EXAMINATION FOR RECRUITMENT TO THE POSTS OF DISTRICT JUDGES**
ಜಿಲ್ಲಾ ನ್ಯಾಯಾಧೀಶರುಗಳ ಹುದ್ದೆಗಳ ನೇಮಕಾತಿಯ ಮುಖ್ಯ ಲಿಖಿತ ಪರೀಕ್ಷೆ

**CRIMINAL LAW**
ಅಪರಾಧಿಕ ಕಾನೂನು

**QUESTION PAPER**
ಪ್ರಶ್ನೆ ಪತ್ರಿಕೆ

**Date: 16.02.2020** | **Max. Marks: 150**
ದಿನಾಂಕ: 16.02.2020 | ಗರಿಷ್ಠ ಅಂಕಗಳು: 150

**TIME: 2.30 pm to 5.30 pm**
ಸಮಯ: ಮಧ್ಯಾಹ್ನ 2.30 ರಿಂದ 5.30 ಘಂಟೆ

**INSTRUCTIONS TO THE CANDIDATES:**
ಅಭ್ಯರ್ಥಿಗಳಿಗೆ ಸೂಚನೆಗಳು:

1) *The candidates should note Rule 5(b) of the Karnataka Judicial Service (Recruitment) (Amendment) Rules, 2016 that reads as under:*

*Main Examination:*

*The Competitive Written Examination for recruitment of District Judges shall consist of:-*

(i) *Written Examination of two papers each of three hours duration with 150 maximum marks of each paper-one in Civil Law and another in Criminal Law.*

(ii) *It is compulsory for all candidates to answer at least one of the paper in English language and in so far as the other paper is concerned, it shall be optional for the candidates to answer the same either in English or in Kannada in which event the said paper shall be answered entirely in the language in which option is exercised.*

Teachingninja.in

1) ಕರ್ನಾಟಕ ನ್ಯಾಯಿಕ ಸೇವಾ (ನೇಮಕಾತಿ) (ತಿದ್ದುಪಡಿ) ನಿಯಮಗಳು 2016ರ ನಿಯಮ 5(ಬಿ)ಯನ್ನು ಈ ಕೆಳಗಿನಂತೆ ಓದಲಾಗುವುದು ಎಂದು ಅಭ್ಯರ್ಥಿಗಳು ಗಮನಿಸತಕ್ಕದ್ದು:

ಮುಖ್ಯ ಪರೀಕ್ಷೆ:

ಜಿಲ್ಲಾ ನ್ಯಾಯಾಧೀಶರ ನೇಮಕಾತಿಯಲ್ಲಿ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯು ಒಳಗೊಂಡಿದ್ದು:-

(i) ಲಿಖಿತ ಪರೀಕ್ಷೆಯು ಎರಡು ಪತ್ರಿಕೆಯದಾಗಿದ್ದು ತಲಾ ಮೂರು ಗಂಟೆ ಅವಧಿಯ ಪ್ರತಿ ಪತ್ರಿಕೆಯು 150 ಗರಿಷ್ಠ ಅಂಕಗಳು ಉಳ್ಳದ್ದು – ಒಂದು ದಿವಾಣಿ ಕಾನೂನು ಮತ್ತೊಂದು ಅಪರಾಧಿಕ ಕಾನೂನುದಾಗಿರುತ್ತದೆ.

(ii) ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ಕನಿಷ್ಟ ಪಕ್ಷ ಒಂದು ಪತ್ರಿಕೆಯನ್ನು ಆಂಗ್ಲ ಭಾಷೆಯಲ್ಲಿ ಉತ್ತರಿಸಬೇಕಾಗುವುದು ಮತ್ತು ಮತ್ತೊಂದು ಪತ್ರಿಕೆಗೆ ಸಂಬಂಧಿಸಿದಂತೆ ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ, ಆ ಸಂದರ್ಭದಲ್ಲಿ ಆ ಪತ್ರಿಕೆಯನ್ನು ಪೂರ್ತಿ ಆಯ್ಕೆ ಮಾಡಿದ ಭಾಷೆಯಲ್ಲಿ ಉತ್ತರಿಸತಕ್ಕದ್ದು.

*2) If there is any difference in the question in English language and Kannada language, the question framed in English language shall prevail.*

ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ವ್ಯತ್ಯಾಸ ಕಂಡುಬಂದಲ್ಲಿ ಆಂಗ್ಲ ಭಾಷೆಯಲ್ಲಿ ಮುದ್ರಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ.

*3) Write your register number only on the cover page in the space provided and nowhere else. You must not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.*

ನಿಮ್ಮ ರಿಜಿಸ್ಟರ್ ನಂಬರನ್ನು ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.

**1. Write an order on the bail petition filed by the accused under Sec.438 of the Code of Criminal Procedure, 1973, on the basis of the following facts.** **25 Marks**

On the basis of the complaint lodged by one Madappa Harijan, the Mandya Town Police registered the FIR in Crime No.100 of 2017, by alleging that the accused has committed the offences



Teachingninja.in

punishable under Section 504, 326 and 506 of the Indian Penal Code and Section 3(1) (r) and (s) and Sec.3(2) (V) of the Scheduled Casts and the Scheduled Tribes (Prevention of Atrocities) Act, 1989.

It was alleged in the complaint that on 01.02.2017 at about 6.00 p.m. when the complainant, who belongs to a scheduled caste, was in his house, the accused came there and picked up a quarrel with him, dragged him to a public road, abused him in a filthy language and assaulted him with a long, causing grievous injuries to him, posed a threat to kill him, insulted and intimidated him by taking the name of his caste, by knowing very well that the complainant belongs to the schedule caste.

The accused filed a petition before the Additional District and Sessions Court, Mandya under Section 438 of the Code of Criminal Procedure, 1973, praying for an anticipatory bail.

The learned Special Public Prosecutor filed objections to the bail petition and contended that the petition filed by the accused/petitioner seeking anticipatory bail is not maintainable. The accused/petitioner has committed a heinous offence against the complainant, who belongs to the schedule caste. Sec. 18 of the Scheduled Casts and the Scheduled Tribes (Prevention of Atrocities) Act, 1989 bars the granting of anticipatory bail to the accused who have committed an offence under the said Act. The alleged offences are punishable with imprisonment for life. The accused/petitioner is required for custodial interrogation. The accused is powerful and he may threaten the prosecution witnesses and tamper the evidence. On all these grounds, the learned Special Public Prosecutor prayed for rejection of the anticipatory bail petition.



Teachingninja.in

**ಈ ಕೆಳಕಂಡ ಸಂಗತಿಗಳ ಆಧಾರದ ಮೇಲೆ ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 438ರ ಅಡಿಯಲ್ಲಿ ಆರೋಪಿಯು ಸಲ್ಲಿಸಿರುವ ಜಾಮೀನು ಅರ್ಜಿಯ ಮೇಲೆ ಆದೇಶವನ್ನು ಬರೆಯಿರಿ.** **25 ಅಂಕಗಳು**

ಓರ್ವ ಮಾದಪ್ಪ ಹರಿಜನ ಎನ್ನುವವರು ಸಲ್ಲಿಸಿದ್ದ ಫಿರ್ಯಾದಿಯ ಆಧಾರದ ಮೇಲೆ ಮಂಡ್ಯ ನಗರ ಪೋಲೀಸರು ಕ್ರೈಂ ನಂ.100/2017 ರಲ್ಲಿ ಆರೋಪಿಯು ಭಾರತೀಯ ದಂಡ ಸಂಹಿತೆಯ ಕಲಂ 504, 326 ಮತ್ತು 506 ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯಿದೆ, 1989ರ ಕಲಂ 3(1) (ಆರ್) ಮತ್ತು (ಎಸ್) ಮತ್ತು ಕಲಂ 3(2) (V)ರ ಅಡಿಯಲ್ಲಿ ಅಪರಾಧವೆಸಗಿದ್ದಾನೆ ಎಂದು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ್ದರು.

ಫಿರ್ಯಾದಿಯಲ್ಲಿ ಆರೋಪಿಸಿದ ಪ್ರಕಾರ ದಿನಾಂಕ 01.02.2017ರಂದು ಸಂಜೆ 6-00 ಗಂಟೆಗೆ ಪರಿಶಿಷ್ಟ ಜಾತಿಗೆ ಸೇರಿದ ಫಿರ್ಯಾದಿಯು ತನ್ನ ಮನೆಯಲ್ಲಿದ್ದಾಗ ಆರೋಪಿಯು ಅಲ್ಲಿಗೆ ಬಂದು ಆತನೊಂದಿಗೆ ಜಗಳ ತೆಗೆದು ಆತನನ್ನು ಸಾರ್ವಜನಿಕ ರಸ್ತೆಗೆ ಎಳೆದಾಡಿ ಆತನನ್ನು ಅವಾಚ್ಯ ಶಬ್ದಗಳಿಂದ ಬೈದು ಲಾಂಗಿನಿಂದ ಹೊಡೆದು ಹಲ್ಲೆ ಮಾಡಿ ಗಂಭೀರ ಸ್ವರೂಪದ ಗಾಯವನ್ನುಂಟು ಮಾಡಿ ಆತನಿಗೆ ಕೊಲೆ ಬೆದರಿಕೆ ಹಾಕಿ ಫಿರ್ಯಾದಿಯು ಪರಿಶಿಷ್ಟ ಜಾತಿಗೆ ಸೇರಿದವನೆಂದು ತಿಳಿದು ಆತನ ಜಾತಿಯ ಹೆಸರನ್ನು ಉಲ್ಲೇಖಿಸಿ ಆತನಿಗೆ ಅವಮಾನ ಮಾಡಿ ಬೆದರಿಕೆ ಹಾಕಿದ್ದನು.

ಆರೋಪಿಯು ಮಂಡ್ಯದ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಮುಂದೆ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 438ರ ಅಡಿಯಲ್ಲಿ ನಿರೀಕ್ಷಣಾ ಜಾಮೀನನ್ನು ಕೋರಿ ಅರ್ಜಿಯನ್ನು ಸಲ್ಲಿಸಿದ್ದರು.

ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಜಾಮೀನು ಅರ್ಜಿಗೆ ತಕರಾರನ್ನು ಸಲ್ಲಿಸಿ ಆರೋಪಿ/ಅರ್ಜಿದಾರ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿ ಊರ್ಜಿತ ಅಲ್ಲ. ಆರೋಪಿ/ಅರ್ಜಿದಾರ ಪರಿಶಿಷ್ಟ ಜಾತಿಗೆ ಸೇರಿದ ಫಿರ್ಯಾದಿಯ ವಿರುದ್ಧ ಹೀನಾಯಾ ಅಪರಾಧವನ್ನು ಮಾಡಿರುತ್ತಾನೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯಿದೆ, 1989ರ ಕಲಂ 18 ಆ ಕಾಯಿದೆಯ ಅಡಿಯಲ್ಲಿ ಅಪರಾಧ ಮಾಡಿದ ಆರೋಪಿಗೆ ನಿರೀಕ್ಷಣಾ ಜಾಮೀನು ನೀಡುವುದನ್ನು ಪ್ರತಿಬಂಧಿಸುತ್ತದೆ. ಆರೋಪಿಯು ಮಾಡಿರುವ ಅಪರಾಧಕ್ಕೆ ಜೀವಾವಧಿ ಶಿಕ್ಷೆ ವಿಧಿಸಲ್ಪಡುತ್ತದೆ. ಆರೋಪಿ/ಅರ್ಜಿದಾರ ಪಾಲನಾ ವಿಚಾರಣೆಗೆ ಅವಶ್ಯಕತೆ ಇರುತ್ತಾನೆ. ಆರೋಪಿಯು ಓರ್ವ ಪ್ರಭಲ ವ್ಯಕ್ತಿಯಾಗಿದ್ದು ಆತ ಅಭಿಯೋಜನಾ ಸಾಕ್ಷಿದಾರರನ್ನು ಬೆದರಿಸಿ ಸಾಕ್ಷ್ಯವನ್ನು ತಿರುಚುತ್ತಾನೆ. ಈ ಎಲ್ಲಾ ಕಾರಣಗಳಿಂದ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾ ಮಾಡಲು ವಿನಂತಿಸಿದ್ದಾರೆ.



Teachingninja.in

**2. Frame the appropriate charge for trial of an accused on the basis of the following charge sheet material:** **15 Marks**

One Kiran Kumar has lodged a complainant before the Town Police Station, Bagalkot by alleging that on 22.05.2012 at 8.30 a.m. in front of plot No.27 of Navanagar, Bagalkot, the accused picked up a quarrel with the father (CW5) and the mother (CW6) of the complainant and abused them in a filthy language with an intention to insult them and dragged CW6 by holding her hair and tried to outrage her modesty and assaulted her with a club causing simple injury to her and accused knocked down two teeth of CW5 by forcibly hitting on his face with hand and tried to stab CW5 with a knife and there by made an attempt to murder him.

With these allegations, the Police Inspector of Bagalkot Town P.S. has filed the charge sheet before the JMFC., Bagalkot and the case was committed to the District and Sessions Court, Bagalkot, for trial.

**ಈ ಕೆಳಕಂಡ ದೋಷಾರೋಪಣ ಪತ್ರದ ಆಧಾರದ ಮೇಲೆ ಆರೋಪಿಯ ವಿರುದ್ಧ ಸೂಕ್ತ ದೋಷಾರೋಪಣೆಯನ್ನು ರೂಪಿಸಿ:** **15 ಅಂಕಗಳು**

ಓರ್ವ ಕಿರಣ್ ಕುಮಾರ್ ಎನ್ನುವವರು ಬಾಗಲಕೋಟೆ ನಗರ ಪೋಲೀಸ್ ಠಾಣೆಯಲ್ಲಿ ಒಂದು ಫಿರ್ಯಾದಿಯನ್ನು ಸಲ್ಲಿಸಿ ದಿನಾಂಕ 22.05.2012ರಂದು ಬೆಳಗ್ಗೆ 8.30 ಗಂಟೆಗೆ ಬಾಗಲಕೋಟೆ ನವನಗರದ ಪ್ಲಾಟ್ ನಂ.27ರ ಮುಂಭಾಗದಲ್ಲಿ ಆರೋಪಿಯು ಫಿರ್ಯಾದಿಯ ತಂದೆ (ಚಾ.ಸಾ.5) ಮತ್ತು ತಾಯಿ (ಚಾ.ಸಾ.6) ಇವರೊಂದಿಗೆ ಜಗಳ ತೆಗೆದು ಅವರಿಗೆ ಅವಮಾನ ಮಾಡುವ ಉದ್ದೇಶದಿಂದ ಅವಾಚ್ಯ ಶಬ್ದಗಳಿಂದ ಬೈದು ಚಾ.ಸಾ.6 ರವರನ್ನು ಆಕೆಯ ಕೂದಲನ್ನು ಹಿಡಿದು ಎಳೆದಾಡಿ ಆಕೆಯ ಮಾನಭಂಗ ಮಾಡಲು ಪ್ರಯತ್ನಿಸಿ ಆಕೆಗೆ ಒಂದು ದೊಣ್ಣೆಯಿಂದ ಹೊಡೆದು ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯ ಉಂಟು ಮಾಡಿ ಆರೋಪಿಯು ಚಾ.ಸಾ.5 ರವರ ಮುಖಕ್ಕೆ ಕೈಗಳಿಂದ ಬಲವಾಗಿ ಹೊಡೆದು ಹಲ್ಲೆ ಮಾಡಿ ಆತನ ಎರಡು ಹಲ್ಲುಗಳನ್ನು ಉದುರಿಸಿ ಆತನಿಗೆ ಚೂರಿಯಿಂದ ಇರಿಯಲು ಯತ್ನಿಸಿ ಕೊಲೆ ಮಾಡಲು ಪ್ರಯತ್ನ ಪಟ್ಟಿದ್ದರು ಎಂಬುದಾಗಿದೆ.



Teachingninja.in

ಈ ಎಲ್ಲಾ ಆರೋಪಗಳನ್ನು ಮಾಡಿ ಬಾಗಲಕೋಟೆ ನಗರ ಪೋಲೀಸ್ ಠಾಣೆಯ ಪೋಲೀಸ್ ನಿರೀಕ್ಷಕರು ಬಾಗಲಕೋಟೆ ಪ್ರಥಮ ದರ್ಜೆ ನ್ಯಾಯಾಂಗ ದಂಡಾಧಿಕಾರಿಗಳ ಮುಂದೆ ದೋಷಾರೋಪಣ ಪತ್ರವನ್ನು ಸಲ್ಲಿಸಿದ್ದು ಆ ಪ್ರಕರಣ ಬಾಗಲಕೋಟೆ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ವಿಚಾರಣೆಗಾಗಿ ಒಪ್ಪಿಸಲ್ಪಟ್ಟಿತು.

**3. Translate the following passage as extracted from a Judgment to Kannada language:** **15 Marks** 15 ಅಂಕಗಳು

ಈ ಕೆಳಕಂಡ ತೀರ್ಪಿನ ಭಾಗವನ್ನು ಕನ್ನಡ ಭಾಷೆಗೆ ಅನುವಾದಿಸಿ.

What is sought to be argued by the learned counsel for the appellant is that the normal tendency would be to save the injured but however, Shobha did not make any attempt. Different persons react differently under different circumstances. The moment she saw her mother-in-law being set ablaze, she came out of the house screaming in order to take the help of people. It is her specific case that her mother and father-in-law rushed to the house and tried to save Yallamma. A suggestion was put to her that her mother-in-law was not capable of talking which has been specifically denied. In fact, Shobha has also withstood the rigor of cross-examination. Just because she is the daughter-in-law of the deceased, her evidence cannot be rejected outright. The only caveat is to assess her evidence with caution.

As per the facts in the case of RAVIKUMAR (supra), there was no enmity between the couple at any point of time. The heated exchange took place because of the reluctance of Padma to go to Mandya. Being enraged by her refusal to accompany him to see his ailing father, he stabbed her and poured kerosene. But in the present case, the accused had filed a case against the deceased and other family members and there is a specific admission to this



Teachingninja.in

effect. They were not on talking terms and the hidden enmity was evident. After some time, both the accused went inside the house, poured kerosene and ignited her. Thus the facts of the present case are clearly distinguishable with the facts forthcoming in the case of RAVIKUMAR.

**4. Translate the following passage as extracted from a deposition to English language:** **15 Marks**

**ಈ ಕೆಳಕಂಡ ಸಾಕ್ಷಿ ಹೇಳಿಕೆಯ ಭಾಗವನ್ನು ಆಂಗ್ಲ ಭಾಷೆಗೆ ಅನುವಾದಿಸಿ:** **15 ಅಂಕಗಳು**

ಬಳಿಕ ಆರೋಪಿತರು ನನ್ನನ್ನು ಕಡೂರು ಬಸ್ ನಿಲ್ದಾಣಕ್ಕೆ ಬಿಟ್ಟು ಹೋದರು. ಬೆಳಿಗ್ಗೆ ಆದ ನಂತರ ನಾನು ಕಡೂರಿನಿಂದ ಒಂದು ಮಿನಿ ಟೆಂಪೋ ಮೂಲಕ ನನ್ನ ತವರು ಮನೆಗೆ ಹೋಗಿದ್ದೆನು. ನಾನು ನನ್ನ ತಂದೆ ತಾಯಿ ಬಳಿ ನನ್ನ ಅತ್ತೆಯೊಂದಿಗೆ ಜಗಳ ಮಾಡಿ ಬಂದಿರುವುದಾಗಿ ಹೇಳಿದೆನು. ನನ್ನ ತಂದೆ ತಾಯಿ ನನ್ನ ಗಂಡನ ಮನೆಗೆ ದೂರವಾಣಿ ಕರೆ ಮಾಡಿ ನಾನು ತವರು ಮನೆಗೆ ಬಂದಿರುವ ವಿಚಾರವನ್ನು ತಿಳಿಸಿದರು. ದಿನಾಂಕ 29.02.2018 ರಂದು ನನ್ನ ಅಣ್ಣ ಲಕ್ಷ್ಮಿದಾಸ ನನಗೆ ಬುದ್ದಿವಾದ ಹೇಳಿ ನನ್ನನ್ನು ನನ್ನ ಗಂಡನ ಮನೆಗೆ ಬಿಟ್ಟು ಬಂದರು. ಆ ಬಳಿಕ ನಾನು ನನ್ನ ಗಂಡನ ಮನೆಯಲ್ಲಿ ಇದ್ದು ಆರೋಪಿತರು ನನ್ನ ಮೇಲೆ ಅತ್ಯಾಚಾರ ಮಾಡಿರುವ ವಿಚಾರವನ್ನು ನಾನು ಯಾರಿಗೂ ಕೂಡ ಹೇಳಿರಲಿಲ್ಲ. ದಿನಾಂಕ 11.05.2018 ರಂದು ನಾನು ಸಂತೆ ಮಾಡುವ ಸಲುವಾಗಿ ಊರ ಕಡೆ ಹೋಗಿದ್ದೆನು. ನಾನು ವಾಪಸ್ಸು ಮನೆಗೆ ಬರುತ್ತಿದ್ದ ಕಾಲಕ್ಕೆ 1 ಮತ್ತು 2ನೇ ಆರೋಪಿತರು ಬೈಕಿನಲ್ಲಿ ಹಿಂಬಾಲಿಸಿದರು. 1 ಮತ್ತು 2ನೇ ಆರೋಪಿತರು ನನಗೆ ಮೊನ್ನೆ ಘಟನೆ ನಡೆದ ಸ್ಥಳಕ್ಕೆ ಪುನಃ ಬರಬೇಕು ಇಲ್ಲದಿದ್ದಲ್ಲಿ ಈ ವಿಚಾರವನ್ನು ನಿನ್ನ ಗಂಡನಿಗೆ ಹೇಳುತ್ತೇವೆ ಮತ್ತು ಊರಲ್ಲಿ ನಿನ್ನ ಹೆಸರು ಕೆಡಿಸುತ್ತೇವೆಂದು ಬೆದರಿಸಿದರು. ಆ ಕಾಲಕ್ಕೆ ಊರ ಕಡೆಯಿಂದ ಜನರು ಬರುತ್ತಿರುವುದನ್ನು ನೋಡಿ 1 ಮತ್ತು 2ನೇ ಆರೋಪಿತರು ಅಲ್ಲಿಂದ ಹೋದರು. ನಾನು ಅಳುತ್ತಾ ಮನೆಗೆ ಹೋಗಿ ನನ್ನ ಗಂಡನ ಬಳಿ ಈ ಎಲ್ಲ ವಿಚಾರವನ್ನು ತಿಳಿಸಿದೆನು. ಬಳಿಕ ಅಂದರೆ ಮರುದಿನ ನಾನು ಕಡೂರು ಪೋಲೀಸ್ ಠಾಣೆಗೆ ಹೋಗಿ ಈ ಆರೋಪಿತರ ವಿರುದ್ಧ ಒಂದು ಪಿರ್ಯಾದಿಯನ್ನು ಕೊಟ್ಟಿದ್ದೆನು. ಆ ಪಿರ್ಯಾದಿಯನ್ನು ನಿಪಿ–1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–1ಎ ಎಂದು ಗುರುತಿಸಲಾಗಿದೆ.

**5.** Which specific provision of law have to be invoked under the following circumstances: **2 x 5 = 10 Marks**

a) To issue summons to the person to produce the documents in his possession to the court for the purpose of trial.



Teachingninja.in

b) To grant bail to the accused on the ground of the prosecution not filing the charge sheet within the period of 90 days or 60 days.

c) To compound the offences with the permission of the Court.

d) To discharge the accused in a case before the Court of Sessions.

e) To suspend the sentence and release the convicted accused on bail by the court which convicted the accused.

ಈ ಕೆಳಗಿನ ಸಂದರ್ಭಗಳಲ್ಲಿ ನಿಖರವಾಗಿ ಯಾವ ಕಾನೂನಿನ ನಿಯಮಗಳನ್ನು ಉಲ್ಲೇಖಿಸಬೇಕು: **2 x 5 = 10 ಅಂಕಗಳು**

ಎ) ಆರೋಪ ವಿಚಾರಣೆಯ ಉದ್ದೇಶಕ್ಕಾಗಿ ನ್ಯಾಯಾಲಯಕ್ಕೆ ದಸ್ತಾವೇಜು ಹಾಜರು ಪಡಿಸುವಂತೆ ಯಾವುದೇ ವ್ಯಕ್ತಿಗೆ ಸಮನ್ಸ್ ನೀಡಲು.

ಬಿ) 90 ದಿನಗಳ ಅಥವಾ 60 ದಿನಗಳ ಒಳಗಡೆ ಅಭಿಯೋಜನೆಯು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸದ ಕಾರಣದಿಂದ ಆರೋಪಿಗೆ ಜಾಮೀನು ನೀಡಲು.

ಸಿ) ನ್ಯಾಯಾಲಯದಿಂದ ಅನುಮತಿಯನ್ನು ಪಡೆದು ಅಪರಾಧಗಳನ್ನು ರಾಜಿ ಮಾಡಲು.

ಡಿ) ಸತ್ರ ನ್ಯಾಯಾಲಯದಲ್ಲಿನ ಮೊಕದ್ದಮೆಯಲ್ಲಿ ಆರೋಪಿಯನ್ನು ಬಿಡುಗಡೆ ಮಾಡಲು.

ಇ) ಆರೋಪಿಯನ್ನು ತಪ್ಪಿತಸ್ತನೆಂದು ನಿರ್ಣಯಿಸಿದ ನ್ಯಾಯಾಲಯವೇ ದಂಡಾದೇಶವನ್ನು ನಿಲಂಬಿಸಿ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು.

**6.** Explain the procedure for conducting a trial before a Court of Sessions. **10 Marks**

ಸತ್ರ ನ್ಯಾಯಾಲಯದ ಮುಂದೆ ಅಧಿವಿಚಾರಣೆಯನ್ನು ನಡೆಸುವ ವಿಧಾನಗಳನ್ನು ವಿವರಿಸಿ. **10 ಅಂಕಗಳು**

**7.** Explain the principles enunciated by the Hon'ble Supreme Court in various decisions for appreciating circumstantial evidence in a criminal case. **10 Marks**

ಒಂದು ಕ್ರಿಮಿನಲ್ ಪ್ರಕರಣದಲ್ಲಿ ಸಾಂದರ್ಭಿಕ ಸಾಕ್ಷ್ಯವನ್ನು ಯಾವ ರೀತಿ ಪರಿಗಣಿಸಬಹುದು ಎನ್ನುವ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ತನ್ನ ಹಲವಾರು ತೀರ್ಪುಗಳಲ್ಲಿ ಹೇಳಿರುವ ತತ್ವಗಳನ್ನು ವಿವರಿಸಿ. **10 ಅಂಕಗಳು**



Teachingninja.in

8. What are the powers of the Investigating Officer in the matter of further investigation under Section 173(8) of The Code of Criminal Procedure, 1973 and whether the Court can also give directions for further investigation and if so, when? **10 Marks**

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 173(8)ರ ಅಡಿಯಲ್ಲಿ ತನಿಖಾಧಿಕಾರಿಯವರಿಗೆ ಹೆಚ್ಚಿನ ತನಿಖೆ ನಡೆಸಲು ಇರುವ ಅಧಿಕಾರ ಏನು ಮತ್ತು ನ್ಯಾಯಾಲಯವು ಹೆಚ್ಚಿನ ತನಿಖೆಯನ್ನು ನಡೆಸಲು ನಿರ್ದೇಶನ ನೀಡಬಹುದೇ ಮತ್ತು ಹೌದು ಎಂದಾದರೆ ಯಾವ ಸಂದರ್ಭದಲ್ಲಿ? 10 ಅಂಕಗಳು

9. Explain the presumptions available under **ANY TWO** of the following provisions: **2 x 5 = 10 Marks**

a) Section 29 and 30 of The Protection of Children from Sexual Offences Act (POCSO) 2012.

b) Section 113A of The Indian Evidence Act, 1872.

c) Section 20 of The Prevention of Corruption Act, 1988.

ಈ ಕೆಳಕಂಡ ಕಾನೂನುಗಳ ಪೈಕಿ **ಯಾವುದಾದರು ಎರಡರಲ್ಲಿ** ಲಭ್ಯವಿರುವ ಪೂರ್ವಭಾವನೆಗಳನ್ನು ವಿವರಿಸಿ: **2 x 5 = 10 ಅಂಕಗಳು**

ಎ) ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಅಧಿನಿಯಮ (ಪೋಕ್ಸೋ) 2012ರ ಕಲಂ 29 ಮತ್ತು 30.

ಬಿ) ಭಾರತ ಸಾಕ್ಷ್ಯ ಆಧಿನಿಯಮ, 1872ರ ಕಲಂ 113ಎ.

ಸಿ) ಭ್ರಷ್ಟಾಚಾರ ತಡೆ ಅಧಿನಿಯಮ, 1988ರ ಕಲಂ 20.

10. Write short notes on how a criminal court should assess and appreciate the evidence of **ANY TWO** of the following witness: **2 x 5 = 10 Marks**

a) Expert witness.

b) Child witness.

c) Hostile witness.

ಈ ಕೆಳಗಿನವುಗಳ ಪೈಕಿ **ಯಾವುದಾದರು ಎರಡು** ಸಾಕ್ಷಿಗಳ ಸಾಕ್ಷ್ಯವನ್ನು ಅಪರಾಧಿಕ ನ್ಯಾಯಾಲಯವು ಯಾವ ರೀತಿ ಮೌಲ್ಯಮಾಪನ ಮತ್ತು ಪರಿಗಣಿಸಬೇಕಾಗುತ್ತದೆ ಎಂಬುದರ ಬಗ್ಗೆ ಟಿಪ್ಪಣಿ ಬರೆಯಿರಿ: **2 x 5 = 10 ಅಂಕಗಳು**

ಎ) ತಜ್ಞ ಸಾಕ್ಷಿ.

ಬಿ) ಮಕ್ಕಳ ಸಾಕ್ಷಿ

ಸಿ) ಪ್ರತಿಕೂಲ ಸಾಕ್ಷಿ.



Teachingninja.in

**11.** Briefly state the legal principles involved in **ANY FOUR** of the following decisions: **2½ X 4 = 10 Marks**

a) Lalitha Kumari Vs. Government of Uttar Pradesh and others (2014) 2 SCC 1

b) Smt. Selvi Vs. State of Karnataka (2010) 7 SCC 263

c) Anvar P.V. Vs. P.K.Basheer (2014) 10 SCC 473

d) Siddharam Satlingappa Mhetre Vs. State of Maharastra (2011) 1 SCC 694

e) Arnesh Kumar Vs. State of Bihar (2014) 8 SCC 273

f) Asian Resurfacing of Road Agency Pvt Ltd Vs. Central Bureau of Investigation. AIR 2018 SC 2039

ಈ ಕೆಳಗಿನ ಪೈಕಿ ಯಾವುದಾದರು ನಾಲ್ಕು ತೀರ್ಪಿನಲ್ಲಿ ಒಳಗೊಂಡಿರುವ ಕಾನೂನು ತತ್ವಗಳನ್ನು ಸಂಕ್ಷಿಪ್ತವಾಗಿ ತಿಳಿಸಿ: **2½ X 4 = 10 ಅಂಕಗಳು**

ಎ) ಲಲಿತ ಕುಮಾರಿ ವಿರುದ್ಧ ಉತ್ತರ ಪ್ರದೇಶ ಸರ್ಕಾರ ಮತ್ತು ಇತರರು (2014) 2 ಎಸ್‌ಸಿಸಿ 1

ಬಿ) ಶ್ರೀಮತಿ ಸೆಲ್ವಿ ವಿರುದ್ಧ ಕರ್ನಾಟಕ ಸರ್ಕಾರ (2010) 7 ಎಸ್‌ಸಿಸಿ 263

ಸಿ) ಅನ್ವರ್ ಪಿ.ವಿ. ವಿರುದ್ಧ ಪಿ.ಕೆ.ಬಷೀರ್ (2014) 10 ಎಸ್‌ಸಿಸಿ 473

ಡಿ) ಸಿದ್ದರಾಮ ಸತ್ಲಿಂಗಪ್ಪ ಮೇತ್ರೆ ವಿರುದ್ಧ ಮಹಾರಾಷ್ಟ್ರ ರಾಜ್ಯ (2011) 1 ಎಸ್‌ಸಿಸಿ 694

ಇ) ಅರ್ನೆಷ್ ಕುಮಾರ್ ವಿರುದ್ಧ ಬಿಹಾರ ರಾಜ್ಯ (2014) 8 ಎಸ್‌ಸಿಸಿ 273



Teachingninja.in

ಎಫ್) ಏಷಿಯನ್ ರೀಸರ್ಫೇಸಿಂಗ್ ಆಫ್ ರೋಡ್ ಏಜೆನ್ಸಿ ಪ್ರೈ.ಲಿ. ವಿರುದ್ಧ ಸೆಂಟ್ರಲ್ ಬ್ಯೂರೊ ಆಫ್ ಇನ್‌ವೆಸ್ಟಿಗೇಷನ್, ಏಐಆರ್ 2018 ಎಸ್‌ಸಿ 2039

**12.** Write short notes on **ANY TWO** of the following: **2 x 5 =10 Marks**

a) Judicial Confession and Extra Judicial Confession

b) Test Identification Parade.

c) Plea Bargaining.

ಈ ಕೆಳಗಿನ ಪೈಕಿ **ಯಾವುದಾದರು ಎರಡರ** ಕುರಿತು ಟಿಪ್ಪಣಿ ಬರೆಯಿರಿ: **2 x 5 =10 ಅಂಕಗಳು**

ಎ) ನ್ಯಾಯಿಕ ತಪ್ಪೊಪ್ಪಿಗೆ ಮತ್ತು ನ್ಯಾಯಾತಿರಿಕ್ತ ತಪ್ಪೊಪ್ಪಿಗೆ

ಬಿ) ಗುರುತು ಪತ್ತೆ ಕವಾಯತ್ತು

ಸಿ) ಆಪಾದನ ಚೌಕಾಷಿ.

********



Teachingninja.in